ಮೂಲ ದಾವಾ ಸಂಖ್ಯೆ.48/2016 ಡಿ ಡಬ್ಲ್ಯೂ 1

(ದಿನಾಂಕ 09-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಎಂ ಎ ವಕೀಲರಿಂದಃ-

ನನಗೆ ವಾದಿ ಪರಿಚಯ ಎಂದರೆ ಸರಿ. ವಾದಿಯು ಸನ್ 2005-06 ರಿಂದ ನಮ್ಮ ಗ್ರಾಮದಲ್ಲಿ ವಾಸವಾಗಿರುತ್ತಾರೆಂದರೆ ಸುಳ್ಳು. ಅವಳು ನಮ್ಮ ಊರಿನಲ್ಲಿ ಸನ್ 2005-06 ರಿಂದ ವಾಸವಿದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಗ್ರಾಮ ಕಡಲಬಾಳು ಗ್ರಾಮ ಪಂಚಾಯ್ತಿಗೆ ಒಳಪಡುತ್ತದೆಂದರೆ ಸರಿ. ಸರ್ಕಾರದಿಂದ ಯಾವುದೇ ನಿವೇಶನ ಹಂಚಿಕೆಯಾದರೆ ಅದನ್ನು ಪಂಚಾಯ್ತಿಯವರೇ ನೀಡುತ್ತಾರೆಂದರೆ ಸರಿ.

ನನ್ನ ತಾಯಿಯ ಹೆಸರು ಚಾರೆಮ್ಮ ಇರುತ್ತದೆ. ಅವರಿಗೆ 3 ಜನ ಮಕ್ಕಳು ಅವರೆಂದರೆ ಮರಿಯಮ್ಮ, ಗಂಗಮ್ಮ ಮತ್ತು ನೀಲಮ್ಮ ಇರುತ್ತಾರೆ. ನೀಲಮ್ಮ ನನ್ನ ಸಹೋದರಿ ಎಂದರೆ ಸರಿ, ಅವರು ಸನ್ 2012-13 ರಿಂದ 2018 ರವರೆಗೆ ಕಡಲಬಾಳು ಗ್ರಾಮ ಪಂಚಾಯ್ತಿಯ ಸದಸ್ಯರಿದ್ದರು ಎಂದರೆ ಸರಿ ನನಗೆ 2 ಜನ ಮಕ್ಕಳು ಅವರೆಂದರೆ ನಿಂಗಮ್ಮ ಮತ್ತು ಕೊಟ್ರೇಶ್ ಇರುತ್ತಾರೆ. ಅವರಿಬ್ಬರು ನಮ್ಮ ಊರಿನಲ್ಲಿ ವಾಸವಾಗಿದ್ದಾರೆಂದರೆ ಸರಿ. ಅವರು ಬೇರೆ ಬೇರೆ ವಾಸವಾಗಿರುತ್ತಾರೆ. ಅವರಿಗೂ ಸಹಾ ಮನೆಗಳು ಇವೆ ಎಂದರೆ ಸರಿ. ನೀಲಮ್ಮನವರಿಗೆ ಒಬ್ಬ ಹೆಣ್ಣುಮಗಳು, 4 ಜನ ಗಂಡು ಮಕ್ಕಳು ಇರುತ್ತಾರೆ. ಅವರಿಗೆ ವಾಸಿಸಲು ಬೇರೆ ಮನೆಗಳು ಇವೆ ಎಂದರೆ ಇಲ್ಲ.

ಸಾಕ್ಷಿಗೆ 2 ಫೋಟೋಗಳನ್ನು ತೋರಿಸಿ ಸದರಿ ಫೋಟೋಗಳಲ್ಲಿ ಕಾಣುವ ಮನೆಯಲ್ಲಿ ನಾನು ವಾಸವಾಗಿರುತ್ತೇನೆಂದರೆ ಸಾಕ್ಷಿಯು ಫೋಟೋಗಳನ್ನು ನೋಡಿ ಒಪ್ಪಿಕೊಂಡಿದ್ದು ಅವುಗಳನ್ನು ನಿಪಿ-18 ಮತ್ತು 19 ಎಂದು ಗುರುತಿಸಲಾಯಿತು. ಹುಲಿಗೆಮ್ಮ ಇವರು ನನಗೆ ಜಾಗ ಬೇಕು ಅಂತಾ ದಾವೆ ದಾಖಲಿಸಿದ್ದಾಳೆ. ದಾವಾಸ್ತಿಯನ್ನು ನನ್ನ ಹೆಸರಿಗೆ ಮಾಡಿಕೊಡಿ ಅಂತಾ ವಾದಿಯು ದಿಃ09-02-2012 ರಂದು ಪಂಚಾಯ್ತಿಗೆ ಊರಿನವರು ಸಹಿ ಮಾಡಿರುವಂತಹ ಒಂದು ಅರ್ಜಿಯನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಕೊಟ್ರಗೌಡ, ಮಂಜುನಾಥಗೌಡ, ಎ ಬಿ ಶಂಕ್ರಪ್ಪ, ಶಿವಾನಂದ, ಮಾರುತಿ, ಮರಿಲಿಂಗನಗೌಡ, ಈಶ್ವರಗೌಡ ಇವರು ನಮ್ಮ ಊರಿನವರು ಎಂದರೆ ಸರಿ. ಇವರೆಲ್ಲರೂ ಮತ್ತು ಊರಿನ ಇತರರು ಸೇರಿ ಹುಲಿಗೆಮ್ಮ ಇವರಿಗೆ ಪಂಚಾಯ್ತಿಯಿಂದ ಜಾಗವನ್ನು ಕೊಡಿಸಿದರೆಂದರೆ ಸುಳ್ಳು. ಅವಳಿಗೆ ಜಾಗ ಮಂಜೂರು ಮಾಡುವ ಪೂರ್ವದಲ್ಲಿಯೇ ಹುಲಿಗೆಮ್ಮ ಇವಳು ಸದರಿ ಜಾಗದಲ್ಲಿ ಗುಡಿಸಲು ಹಾಕಿಕೊಂಡಿದ್ದಳು ಎಂದರೆ

ಸುಳ್ಳು. ಅವಳು ಗುಡಿಸಲು ಹಾಕಿಕೊಂಡು ವಾಸವಾಗಿದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಜಾಗ ನನ್ನದು ನಾನು ವಾಸವಾಗಿದ್ದೇನೆ ಎನ್ನುತ್ತಾರೆ. ಪಂಚಾಯ್ತಿಯವರು ದಿಃ 03-12-2013 ರಂದು ಠರಾವ್ ನಂ.5/2013-14 ರಂತೆ ದಾವಾಸ್ತಿಯನ್ನು ವಾದಿಗೆ ಮಂಜೂರು ಮಾಡಿರುತ್ತಾರೆಂದರೆ ಸುಳ್ಳು.

ನಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ಒಟ್ಟು 5 ಮನೆಗಳಿದ್ದವು ಈಗ 3 ಮನೆಗಳು ಉಳಿದಿರುತ್ತವೆ. ನಿಪಿ-18 ಮತ್ತು 19 ರಲ್ಲಿ ಇರುವ ಮನೆಯ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ಸದರಿ ಮನೆಯ ಸಂಖ್ಯೆ 1 ಮತ್ತು 4 ಅಂತಾ ಇದ್ದು ಅದು ಗೊತ್ತಿದ್ದರೂ ಸಹಾ ನಾನು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನ್ಯಾಯಾಲಯಕ್ಕೆ ನಾನು ಪಟ್ಟಾ, ರಶೀದಿಗಳನ್ನು ಹಾಜರುಪಡಿಸಿದ್ದೇನೆ. ಸದರಿ ಪಟ್ಟಾ ಮತ್ತು ರಶೀದಿ ಯಾವ ಖಾತೆ ಸಂಖ್ಯೆಗೆ ಸಂಬಂಧಪಟ್ಟಿರುತ್ತವಂತಾ ನನಗೆ ಹೇಳಲು ಬರುವುದಿಲ್ಲ ನಾನು ಅನಕ್ಷರಸ್ಥಳು ಇರುತ್ತೇನೆ. ಗ್ರಾಮ ಪಂಚಾಯ್ತಿಯವರು ವಾದಿಯ ಹೆಸರಿಗೆ ನಿಪಿ-15 ಮತ್ತು ನಿಪಿ-17 ರಂತೆ ದೃಢೀಕರಣ ಪತ್ರಗಳನ್ನು ನೀಡಿರುತ್ತಾರೆಂದರೆ ಸುಳ್ಳು. ದಾವಾಸ್ತಿಯನ್ನು ವಾದಿಯ ಹೆಸರಿಗೆ ಗ್ರಾಮ ಪಂಚಾಯ್ತಿಯವರು ಮಂಜೂರು ಮಾಡಿದ ದಿನದಿಂದ ವಾದಿಯು ದಾವಾಸ್ತಿಯಲ್ಲಿ ಸ್ವಾಧೀನದಲ್ಲಿದ್ದು ಅದಕ್ಕೆ ಸಂಬಂಧಿಸಿದ ಕರವನ್ನು ಸಹಾ ವಾದಿಯು ಪಾವತಿಸುತ್ತಾ ಬಂದಿರುತ್ತಾರೆಂದರೆ ಸುಳ್ಳು. ನಾನು ನಿಡಿ-5 ರಂತೆ ಗ್ರಾಮ ಪಂಚಾಯ್ತಿಗೆ ಒಂದು ಅರ್ಜಿ ನೀಡಿರುತ್ತೇನೆಂದರೆ ಸುಳ್ಳು. ಹೊಸ ಆನಂದದೇವನಹಳ್ಳಿ ಗ್ರಾಮದಲ್ಲಿ ನಮ್ಮ ಕುಟುಂಬ ಮಾತ್ರ ಎಸ್ಸಿ ಮೀಸಲು ಕುಟುಂಬ ಎಂದರೆ ಸರಿಯಲ್ಲ.

ದಾವಾಸ್ತಿಯಲ್ಲಿ ಮನೆಕಟ್ಟಲು ನಾನು ಪರವಾನಿಗೆ ಪಡೆದಿದ್ದೇನೆ. ದಿಃ10-02-2016 ರಂದು ಗ್ರಾಮ ಪಂಚಾಯ್ತಿಯವರು ನಮಗೆ ನೋಟೀಸ್ ನೀಡಿ ಪರವಾನಿಗೆ ರದ್ದುಪಡಿಸಿರುತ್ತಾರೆಂದರೆ ಸುಳ್ಳು. ದಿಃ05-02-2016 ರಂದು ನಿಡಿ-14 ರಂತೆ ಗ್ರಾಮ ಪಂಚಾಯ್ತಿಯವರು ನನಗೆ ಮತ್ತು ನಮ್ಮ ಕುಟುಂಬಕ್ಕೆ ಸಂಬಂಧಿಸಿದ ನಿವೇಶನಗಳು ಮಂಜೂರಾಗಿರುವ ಬಗ್ಗೆ 3 ದಿನಗಳ ಅವಧಿಯ ಒಳಗಾಗಿ ಪಟ್ಟಾಗಳನ್ನು ಹಾಜರುಪಡಿಸಲು ಸೂಚಿಸಿದ್ದು ಅವುಗಳನ್ನು ನಾನು ಪಂಚಾಯ್ತಿಗೆ ಹಾಜರುಪಡಿಸಿದ್ದೇನೆ. ಪಂಚಾಯ್ತಿಗೆ ನಾನು ಪಟ್ಟಾಗಳನ್ನು ಹಾಜರುಪಡಿಸಿದ ಬಗ್ಗೆ ಸ್ವೀಕೃತಿಗಳನ್ನು ಪಡೆದಿದ್ದೇನೆ. ಸದರಿ ಸ್ವೀಕೃತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

ಈ ದಾವೆ ದಾಖಲಿಸಲು ಮತ್ತು ನನ್ನ ಸಾಕ್ಷ್ಯ ಪ್ರಮಾಣಪತ್ರ ಬರೆಯಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ಸನ್ 2012-13 ರಿಂದ 2018

ರವರೆಗೆ ನನ್ನ ಸಹೋದರಿ ಗ್ರಾಮ ಪಂಚಾಯ್ತಿ ಸದಸ್ಯಳಾಗಿರುವುದರಿಂದ ಅವಳ ಅಧಿಕಾರ ದುರುಪಯೋಗಪಡಿಸಿಕೊಂಡು ವಾದಿಗೆ ಮನೆಕಟ್ಟಲು ಲೈಸನ್ಸನ್ನು ನೀಡಿರುವುದಿಲ್ಲವೆಂದರೆ ಸರಿಯಲ್ಲ.

ನನ್ನ ಪ್ರತಿವಾದಪತ್ರದಲ್ಲಿ ಪ್ಯಾರಾ ನಂ.4 ಸಿ ದಲ್ಲಿ ಗ್ರಾಮ ಪಂಚಾಯ್ತಿ ಅಧಿಕಾರಿಗಳು ದಾವಾಸ್ತಿಗೆ ಭೇಟಿ ನೀಡಿದ್ದರು ಮತ್ತು ಸರ್ವೆ ಮಾಡಿದ್ದರು ಅಂತಾ ಹೇಳಿದ್ದು ಆ ಬಗ್ಗೆ ನನಗೆ ದಿನಾಂಕ ನೆನಪಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಖಾತಾ ನಂಬರ್ ಮತ್ತು ಆಸ್ತಿ ಸಂಖ್ಯೆ ಮತ್ತು ಚಕ್ಕುಬಂದಿ ಬರೆಸಿದ್ದೇನೆ. ದಾವಾಸ್ತಿ ನನಗೆ ಯಾವುದೇ ರೀತಿಯಿಂದ ಸಂಬಂಧವಿಲ್ಲದಿದ್ದರೂ ಸಹಾ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ದಾವಾಸ್ತಿಯನ್ನು ಕಬಳಿಸಲು ಸುಳ್ಳು ಪ್ರತಿವಾದ ಪತ್ರವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಾವಾಸ್ತಿಯಲ್ಲಿ ಅತಿಕ್ರಮಣ ಮಾಡಿ ಕಟ್ಟಡವನ್ನು ಕಟ್ಟಬಾರದು ಅಂತಾ ನ್ಯಾಯಾಲಯದಲ್ಲಿ ಆದೇಶವಾಗಿದೆ ಎಂದರೆ ಸರಿಯಲ್ಲ. ಆ ರೀತಿ ಆದೇಶವಾಗಿದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ